


ಹಿಮಬೆಟ್ಟಗಳ ನಡುವಿನ ಸರೋವರದ ಚೆಲುವು



ಗುರುಡಂಗ್ಮಾರ್ ಹಾದಿಯುದ್ದಕ್ಕೂ ಧರ್ಮದ ಪ್ರತೀಕವಾಗಿ ಕಂಡುಬರುವ ಬಣ್ಣಬಣ್ಣದ ಬಟ್ಟೆಗಳು

ಸಿಕ್ಕಿಂ ರಾಜ್ಯದಲ್ಲಿ 414 ಕಿ.ಮೀ. ಉದ್ದಕ್ಕೆ ಹರಿವ ತೀಸ್ತಾ ನದಿಗೆ ಆಲ್ಪೈನ್ ಪರ್ವತ ಶ್ರೇಣಿಗಳ ನಡುವೆ ಇರುವ ಈ ಗುರುಡಂಗ್ಮಾರ್ ಕೊಳ ಒಂದು ಪ್ರಮುಖ ನೀರಿನ ಒರತೆಯಾಗಿ ಕೆಲಸ ಮಾಡುತ್ತದೆ.

ಸಿಕ್ಕಿಂನಲ್ಲಿ ಮುಖ್ಯವಾಗಿ ಕಂಡುಬರುವುದು ವಜ್ರಯಾನ ಬೌದ್ಧ ಧರ್ಮ. ಇಲ್ಲಿ ಇನ್ನೂರಕ್ಕೂ ಹೆಚ್ಚು ಬೌದ್ಧ ಧರ್ಮಶಾಲೆಗಳಿವೆ. 8ನೇ ಶತಮಾನದ ಬೌದ್ಧ ಗುರು ಪದ್ಮಸಾಂಭವ ಟಿಬೆಟ್ಟಿನಿಂದ ಪ್ರಯಾಣ ಮಾಡುತ್ತ ಈ ಕಠಿಣ ಮಾರ್ಗದ ಮೂಲಕ ಹೋಗುತ್ತಿರುವಾಗ ಈ ಕೊಳವನ್ನು ಕಂಡ ಎಂಬ ಕಾರಣಕ್ಕೆ ಆತನ ಹೆಸರನ್ನು ಇಡಲಾಗಿದೆ. ಟಿಬೆಟ್ಟಿನ ಬೌದ್ಧ ಧರ್ಮ ಸಂಸ್ಥಾಪಕರಲ್ಲಿ ಈತನೂ ಒಬ್ಬ. ಈತನಿಗೆ ಇತರೆ ಹೆಸರುಗಳೂ ಇದ್ದವು.

ಈ ಸರೋವರಕ್ಕೆ ಗುರು ದಂಬ ಕೊಳ ಎಂಬ ಹೆಸರೂ ಇದೆ. ಇದು ಗುರು ದಗ್ಮಾರ್ ಎನ್ನುವ ಹೆಸರಿನಿಂದ ಬಂದಿದೆ ಎನ್ನಲಾಗಿದೆ. ಇದರ ಅರ್ಥ 'ಕೆಂಪು ಮುಖದ ಗುರು' ಸಾಂಭವ ಎಂತಲೇ. ಕೆಲವರು ಗುರುನಾನಕರು ಇಲ್ಲಿಗೆ ಬಂದಿದ್ದರು ಎಂದು ನಂಬುತ್ತಾರೆ. ಇನ್ನು ಕೆಲವರು ಗುರು ರನ್ಪೋಚೆಯ ಕಾರಣ ಈ ಹೆಸರು ಬಂದಿದೆಯೆಂದು ನಂಬುತ್ತಾರೆ. ಹೀಗಾಗಿ ಅಂದಿನಿಂದಲೂ ಬೌದ್ಧರು, ಸಿಖ್ಖರು ಮತ್ತು ಹಿಂದೂಗಳು ಪವಿತ್ರ ಸ್ಥಳವೆಂದು ನಂಬಿ ಈ ಕೊಳಕ್ಕೆ ನಡೆದುಕೊಳ್ಳುತ್ತಾರೆ.

ಪ್ರತೀತಿಯ ಪ್ರಕಾರ, ಗುರು ಸಾಂಭವ ಈ ಕೊಳವನ್ನು ಮುಟ್ಟಿದ ಭಾಗ, ತಾಪಮಾನ ಅದೆಷ್ಟೇ ಕುಸಿದರೂ ಕಡುಚಳಿಗಾಲದಲ್ಲಿಯೂ ಹೆಪ್ಪುಗಟ್ಟುವುದಿಲ್ಲವಂತೆ. ಇದೇ ಕಾರಣಕ್ಕೆ ಇಲ್ಲಿನ ನೀರು ಕಾಯಿಲೆಗಳನ್ನು ವಾಸಿಮಾಡುತ್ತದೆ ಎಂದು ನಂಬುವವರೂ ಇದ್ದಾರೆ. ಇಲ್ಲಿನ ನೀರನ್ನು ಸೇವಿಸಿದರೆ ಸಂತಾನಹೀನ ದಂಪತಿಗಳಿಗೆ ಮಕ್ಕಳಾಗುತ್ತದೆ ಎಂಬ ಪ್ರತೀತಿ ಇದೆ. ಇಲ್ಲಿಂದ ಕೆಲವು ಕಿ.ಮೀ. ದೂರದಲ್ಲಿ ಬಿಸಿ ನೀರಿನ ಒರತೆಗಳು ಇವೆ. ಈ ಕೊಳದ ತಟದಲ್ಲಿ ಯಾವುದೇ ಗುಡಿಗಳಿಲ್ಲದಿದ್ದರೂ ಸುತ್ತಲೂ ಬೌದ್ಧ ಧರ್ಮದ ನಂಬಿಕೆಯ ಪ್ರಕಾರ ಬಣ್ಣಬಣ್ಣದ ಕಾಗದದ ಹಾಳೆಗಳನ್ನು ಕಟ್ಟಲಾಗಿದೆ. ಆಯಾ ಧರ್ಮಕ್ಕನುಸಾರವಾಗಿ ಜನರು ತಾವೇ ಪುಟ್ಟ ವಿಗ್ರಹಗಳನ್ನು ತಂದು ಕೊಳದ ತಟದಲ್ಲಿಟ್ಟು ಪೂಜೆ ಸಲ್ಲಿಸುತ್ತಾರೆ.

ಈ ಕೊಳದ ತೀರ 5.34 ಕಿ.ಮೀ. ಉದ್ದವಿದೆ. 290 ಎಕರೆ ವಿಸ್ತೀರ್ಣದ ಕೊಳದ ಸುತ್ತಲೂ ನಡೆದಾಡಿ ಬರಲು ಎರಡು ಗಂಟೆಗಳ ಕಾಲವಾದರೂ ಬೇಕು. ಈ ಕೊಳ ಅದೆಷ್ಟು ಎತ್ತರದಲ್ಲಿದೆಯೆಂದರೆ, ಇಲ್ಲಿ ಆಮ್ಲಜನಕಕ್ಕೆ ಕೊರತೆಯಾಗುತ್ತದೆ. ಗಾಳಿಯೇ ಹೆಚ್ಚಿಲ್ಲದ ಕಾರಣ 30–35 ನಿಮಿಷಗಳಿಗಿಂತ ಹೆಚ್ಚು ಸಮಯ ಕಳೆಯುವುದು ಕೆಲವರಿಗೆ ಕಷ್ಟವಾಗಬಹುದು. ರಕ್ತದೊತ್ತಡ, ಉಸಿರಾಟ ತೊಂದರೆಯಿರುವ ಜನ ಇಲ್ಲಿಗೆ ಹೋಗುವುದಾದರೆ ಆಮ್ಲಜನಕದ ಸಣ್ಣ ಸಿಲಿಂಡರೊಂದನ್ನು ಉಸಿರಾಟದ ಉಪಕರಣಗಳೊಂದಿಗೆ ಕೊಂಡೊಯ್ಯಬೇಕಾದೀತು.

ಈ ಜಾಗವನ್ನು ಭಾರತದ ಐದು ಅಪಾಯಕಾರಿ ಜಾಗಗಳಲ್ಲೊಂದು ಎಂದು ಗುರುತಿಸಲಾಗಿದೆ. ಕೆಲವೊಮ್ಮೆ ಇಲ್ಲಿ ಬಲವಾದ ಗಾಳಿಯೂ ಬೀಸಬಲ್ಲದು. ಕಲ್ಲುಬಂಡೆಗಳ ಎರಚಾಟವೂ ಆದ ಉದಾಹರಣೆಗಳಿವೆ (2014). ದೊಡ್ಡ ಕಣಿವೆಯ ನಡುವಲ್ಲಿ ಹರಡಿಕೊಂಡಿರುವ ಈ ವಿಶಾಲ ಕೊಳದ ತಟಕ್ಕೆ ಇಳಿದ ನಂತರ ಮತ್ತೆ ಹತ್ತುವ ವೇಳೆಗೆ ಸುಸ್ತಾಗಬಲ್ಲರು. ಈ ಕೊಳ ತಲುಪಲು ರಸ್ತೆ ನಿರ್ಮಿಸಲಾಗಿದೆಯಾದರೂ ಇದು ಅತ್ಯಂತ ದುರ್ಗಮ ಹಾದಿ.

ರಸ್ತೆಯುದ್ದಕ್ಕೂ ಭಾರತದ ಗಡಿ ಸೈನಿಕರ ತುಕಡಿಗಳು ನೆಲೆಸಿವೆ. 'ಬಾರ್ಡರ್ ರೋಡ್ ಆರ್ಗನೈಸೇಷನ್' (BRO) ಇಲ್ಲಿ ಅವಿರತ ಕೆಲಸ ಮಾಡುತ್ತಲೇ ಇರುತ್ತದೆ. ಇಲ್ಲಿಗೆ ತಲುಪಲು ಲಾಚೆನ್ ಎನ್ನುವ ಜಾಗದಿಂದ 64.3 ಕಿ.ಮೀ.ಗಳನ್ನು ಕ್ರಮಿಸಬೇಕಾಗುತ್ತದೆ. ಸುಮಾರು ನಾಲ್ಕು ಗಂಟೆಗಳ ದುರ್ಗಮ ಪ್ರಯಾಣವದು. ಇಲ್ಲಿಗೆ ಹತ್ತಿರದ ಹಳ್ಳಿಯೆಂದರೆ ತಂಗ್ಗು ಕಣಿವೆ. ಇದು 13.500 ಅಡಿ ಎತ್ತರದಲ್ಲಿರುವ ಹಳ್ಳಿ. ಇಲ್ಲಿಯ ಜನರ ಬದುಕು ಬಹಳ ಕಷ್ಟದ್ದು ಎಂದು ಬೇರೆ ಹೇಳಬೇಕಿಲ್ಲ.

ಸಾಮಾನ್ಯವಾಗಿ ಮಾರ್ಚ್–ಜೂನ್ ತಿಂಗಳ ನಡುವಿನ ಅವಧಿ ಇಲ್ಲಿನ ಪ್ರವಾಸಕ್ಕೆ ಅನುಕೂಲವಾಗಿದ್ದರೂ 5 ಅಥವಾ –5 ಡಿಗ್ರಿ ತಾಪಮಾನ ಕಂಡುಬರುತ್ತದೆ. 5 ವರ್ಷದ ಕೆಳಗಿನ ಮಕ್ಕಳನ್ನು ಆರ್ಮಿ ಇಲ್ಲಿಗೆ ಬರದಂತೆ ನಿರ್ಬಂಧಿಸಿದೆ. ಸೂಕ್ತ ಅನುಮತಿ ಮತ್ತು ಕಾಗದ ಪತ್ರಗಳಿಲ್ಲದೆ ಈ ಜಾಗಕ್ಕೆ ಬರದಂತೆ ಭಾರತ ಸೈನ್ಯ ತಡೆಯುತ್ತದೆ. ಹಾಗಾಗಿ ಅದನ್ನು ಮೊದಲೇ ಹೊಂದಿಸಿಕೊಂಡು ನಂತರ ಪ್ರಯಾಣ ಆರಂಭಿಸುವುದು ಸೂಕ್ತ.

ಈ ಸ್ಥಳ ಸಮುದ್ರ ಮಟ್ಟಕ್ಕಿಂತ ಅತ್ಯಂತ ಎತ್ತರದ ಜಾಗದಲ್ಲಿರುವ ಕಾರಣ ವಾಂತಿ, ತಲೆಸುತ್ತು, ನಿಯಂತ್ರಣ ತಪ್ಪುವುದು ಇತ್ಯಾದಿ ಸಂಭವಿಸಬಹುದು. ಅದಕ್ಕಾಗಿ ಸೂಕ್ತ ಮಾತ್ರೆಗಳನ್ನು ವೈದ್ಯರ ಸಲಹೆ ಮೇರೆಗೆ ಕೊಂಡೊಯ್ಯುವುದು ಉತ್ತಮ. ಇಲ್ಲಿಗೆ ಬರುವ ಪ್ರವಾಸಿಗರು ಹೆಚ್ಚು ಕೂಗಾಡುವುದು, ನೆಗೆದಾಡುವುದು ಏನನ್ನೂ ಮಾಡದೆ ಪರವಶರಾದಂತೆ ಈ ಸರೋವರವನ್ನು ನಿಂತು ನೋಡುತ್ತಾರೆ. ಅಂತಹದ್ದೇನೋ ಭಾರವಾದ ಭಾವವೊಂದು ನಮ್ಮಲ್ಲಿ ತೂಗುವುದು ಕ್ರಮಿಸುವ ಕಠಿಣ ಮಾರ್ಗದ ಕಾರಣವೋ ಅಥವಾ ಆಮ್ಲಜನಕದ ಕೊರತೆಯಿಂದಲೋ ಎಂದು ತಿಳಿಯುವುದಿಲ್ಲ. ದುರ್ಗಮ ರಸ್ತೆಯಲ್ಲಿ ಚಲಿಸಬಲ್ಲ ಪ್ರವಾಸಿ ಜೀಪುಗಳ ಹೊರತಾಗಿ ಇಲ್ಲಿಗೆ ಬೇರೆ ಯಾವ ಸಂಚಾರ ಸೌಕರ್ಯಗಳೂ ಇಲ್ಲ.

ಹಸುರಿನ ಉಸಿರೇ ಇಲ್ಲದೆಯೂ ತನ್ನ ಧೀಮಂತ ವರ್ಚಸ್ಸಿನಿಂದ ಪ್ರವಾಸಿಗರನ್ನು ಪರವಶಗೊಳಿಸಬಲ್ಲ ಸೌಂದರ್ಯ ಮತ್ತು ಹಿರಿಮೆ ಗುರುಡಂಗ್ಮಾರ್ ಸರೋವರದ್ದು.

ಪ್ರತಿಕ್ರಿಯಿಸಿ: feedback@sudha.co.in